ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು, ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ 28.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ. ಎನ್.ಎಸ್.ಹೆಚ್. ವಕೀಲರಿಂದಃ

ನಾನು ನನ್ನ ಮುಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

| ಕ್ರ.ಸಂಖ್ಯೆ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ಒಟ್ಟು ಮೋಕ್ತಿಯಾರ್ ಪತ್ರ | ನಿಪಿ-1 |
| 2. | ದಿನಾಂಕಃ 31.03.2016 ರ ಶುದ್ಧ ಕ್ರಯ ಪತ್ರ | ನಿಪಿ-2 |
| 3. | ಸರ್ವೇ ನಂಬರಃ 104/5 ಬ ರ ಆರ್.ಟಿ.ಸಿ. | ನಿಪಿ-3 |
| 4. | ಗ್ರಾಮ ಲೆಕ್ಕಾಧಿಕಾರಿಗಳು ಕೊಟ್ಟ ಹಾತ್ ನಕಾಶೆ-2 | ನಿಪಿ-4 ಮತ್ತು 5 |
| 5. | ದಿನಾಂಕಃ 25.06.1993 ರ ಖರೀದಿ ರೆಜಿಸ್ಟರ್‌ನ ದೃಢೀಕೃತ ಪ್ರತಿ | ನಿಪಿ-6 |
| 6. | ಸರ್ವೇ ನಂಬರಃ 104/5 ರ ಪಾರ್ಮ್ ನಂಬರ-11 | ನಿಪಿ-7 |
| 7. | ತಾಲೂಕಾ ಸರ್ವೇಯರ್ ನೀಡಿರುವ ಸರ್ವೇ ನಂಬರಃ 104/5 ರ ನಕ್ಷೆ | ನಿಪಿ-8 |
| 8. | ಸರ್ವೇ ನಂಬರಃ 104/5 ಮ್ಯುಟೇಶನ್ ಪ್ರತಿ | ನಿಪಿ-9 |
| 9. | ಓ.ಎಸ್. ನಂಬರಃ 30/2016 ರ ರೋಜನಾಮೆ ಪ್ರತಿ ಮತ್ತು ಪ್ರತಿವಾದಿ ಪತ್ರ | ನಿಪಿ-10 ಮತ್ತು 11 |

| | | |
|---|---|---|
| 10. | ಜಂಟಿ ನಿರ್ದೇಶಕರು ಬೆಳಗಾವಿ ಇವರ ಆದೇಶದ ದೃಢೀಕೃತ ಪ್ರತಿ | ನಿಪಿ–12 |
| 11. | ವಿದ್ಯುತ್ಛಕ್ತಿ ರಸೀದಿಗಳು–3 | ನಿಪಿ–13 ರಿಂದ 15 |
| 12. | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ರಟ್ಟೀಹಳ್ಳಿ ಇವರು ನೀಡಿರುವ ದೃಢೀಕರಣ ಪತ್ರ | ನಿಪಿ–16 |

ಈ ಮೇಲ್ಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು. ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**<u>ಪಾಟೀ ಸವಾಲುಃ</u>** ಪ್ರತಿವಾದಿಯ ಪರ ಶ್ರೀ. ಎಸ್.ಪಿ.ಕೆ. ವಕೀಲರಿಂದಃ

(ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.